


## ಸಮುದ್ರ ಮಥನ




### ಕ್ರಿಕೆಟ್: 'ಸುಧಾ' ಕಾಳಜಿ

'ಟೆಸ್ಟ್ ಕ್ರಿಕೆಟ್ ಸಾಕಾಯ್ತಾ?' ಪ್ರವೀಣ್ ಕುಲಕರ್ಣಿ ಅವರ ಮುಖಪುಟ ಲೇಖನ ಸಾಕಷ್ಟು ಮಾಹಿತಿ ಒದಗಿಸಿತು. ಇಂಗ್ಲೆಂಡಿನಲ್ಲಿ ನಡೆದ ಟೆಸ್ಟ್ ಕ್ರಿಕೆಟ್‌ನ ಸರಣಿ ಸೋತ ಬಗೆಗೆ 'ಸುಧಾ' ನಡೆಸಿರುವ ಸುದೀರ್ಘ ವಿಶ್ಲೇಷಣೆ 'ಸುಧಾ'ಕ್ಕೆ ಭಾರತದ ಕ್ರಿಕೆಟ್ ಬಗೆಗೆ ಇರುವ ಕಾಳಜಿಗೆ ಸಾಕ್ಷಿ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಎಂಥ ಗೀತೆ?

'ಇದು ಟ್ಯಾಗೋರರ ಮನೆ!' (ಅಂಜಲಿ ರಾಮಣ್ಣ). 'ಗೀತಾಂಜಲಿ' ರಚಿತವಾದ ಕೋಣೆ ಈಗ ಶೋಕ 'ಗೀತೆ'ಯನ್ನು ಹಾಡುತ್ತಿದೆಯೆ? ವಿಪರ್ಯಾಸಕ್ಕೆ 'ಜನಗಣಮನ' ಮರುಗಬೇಕು!

–ಸಿಪಿಕೆ, ಮೈಸೂರು

### ಟ್ಯಾಗೋರರ ಮನೆ

ವಿಶ್ವ ಕವಿ ರವೀಂದ್ರನಾಥ ಟ್ಯಾಗೋರರು ತಮ್ಮ ಅಮರ ಕೃತಿ 'ಗೀತಾಂಜಲಿ'ಯನ್ನು ರಚಿಸಿದ ಮನೆಯ ಚಿತ್ರ–ಪರಿಚಯ; ಅವರ 150ನೆಯ ವರ್ಷಾಚರಣೆಯ ಸಂದರ್ಭದಲ್ಲಿ ಪ್ರಕಟವಾಗಿರುವುದು ಸ್ವಾಗತಾರ್ಹ.

–ಎಸ್. ಚನ್ನಪ್ಪ, ಮೈಸೂರು

### ಮಹಾಭಾರತ, ರಾಮಾಯಣ ತಿಳಿಸಿ

ರಾಮಾಯಣದ ಒಂದು ಭಾಗವನ್ನು 'ರಾಜಧರ್ಮ' ಎಂಬ ಹೆಸರಿನ ಕಥೆಯಲ್ಲಿ ತಿಪ್ಪಣ್ಣ ಮರಿಕುಂಟೆ ಕಟ್ಟಿಕೊಟ್ಟಿದ್ದಾರೆ. ಇಂಥಾ ನೂರಾರು ಉಪ ಕಥೆಗಳು ರಾಮಾಯಣ– ಮಹಾಭಾರತದಲ್ಲಿದ್ದರೂ, ವೃದ್ಧರಾದ ನಮಗೇ ತಿಳಿದಿಲ್ಲ! ಇನ್ನು ಮಕ್ಕಳಿಗೆ ಮೊಮ್ಮಕ್ಕಳಿಗೆ ಹೇಗೆ ಈ ಕಥೆಗಳನ್ನು ತಿಳಿಸುವುದು? ಕಾರಣ ಇನ್ನು ಮುಂದೆ ಪ್ರತೀ ವಾರ 'ಸುಧಾ'ದಲ್ಲಿ ಇಂಥಾ ಮಹಾಕಾವ್ಯಗಳ ಉಪ ಕಥೆಗಳನ್ನು ಪ್ರಕಟಿಸಿ. ನಮಗೂ ನಮ್ಮ ಮಕ್ಕಳು–ಮೊಮ್ಮಕ್ಕಳಿಗೆ ಮತ್ತೆ ತಿಳಿಯುವಂತಾಗಲಿ.

–ಎಚ್.ಆರ್. ದೇಸಾಯಿ, ರಾಯಚೂರು

### ಮತ್ಸರ ಇರಬಾರದು

'ಮತ್ಸರ: ಸುಖದ ಶತ್ರು' ರಜನಿ ತಲವಾಟರ ಲೇಖನ ಚೆನ್ನಾಗಿದೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಯುವಕರಿಗೆ ಮಾದರಿ

'ಬೆಳಕಿನ ಕಿರಣ ತಂದ ಹಂದೆ' ಕೆ.ರಾಘವೇಂದ್ರರ ಲೇಖನ ಸಮಯೋಚಿತವಾಗಿತ್ತು. ಹಂದೆ ಯುವಕರಿಗೆ ಮಾದರಿ.

ನಾರಾಯಣ ಯಾಜಿ, ಶಿರಾಲಿ

### ಮಹಾನ್ ಕಲಾವಿದ ಶಮ್ಮಿ

ಹಿಂದಿ ಚಿತ್ರ ಜಗತ್ತಿನ ದಿಗ್ಗಜ ಶಮ್ಮಿಕಪೂರರ ಬಗ್ಗೆ ಲಕ್ಷ್ಮಣ ಕೊಡಸೆಯವರ 'ಶಮ್ಮಿ ಯಾ...ಹೂ!' ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

–ಎಚ್.ಎಸ್. ವಿಶ್ವನಾಥ್, ಶಿವಮೊಗ್ಗ/ ಎಚ್. ಆನಂದ್‌ಕುಮಾರ್, ಚಿತ್ರದುರ್ಗ/ಜಿ.ಕೆ. ಶ್ರೀಮತಿ, ಬೆಂಗಳೂರು/ ಮುಕುಂದ ಹೆರಕಲ್ಲ, ವಾಡಿ/ ತರಂಗಿಣಿ, ತುಮಕೂರು

### ಪಡ್ಡೆಗಳ ಪ್ರೀತಿಯ ನಟ

ತನ್ನ ಅಂಗ ಚೇಷ್ಟೆಗಳಿಂದ 'ಕಪಿ ಕುಣಿತ' ಎಂದು ಶಮ್ಮಿಕಪೂರರನ್ನು ಕರೆಯುತ್ತಿದ್ದರೂ, ಅವನ ಸಿನಿಮಾಗಳನ್ನು ನೋಡುವ ಬಯಕೆ ನನ್ನಂತಹ ಪಡ್ಡೆಗಳಿಗೆ ತಪ್ಪುತ್ತಿರಲಿಲ್ಲ. 'ಜಂಗ್ಲೀ' ಚಿತ್ರ ಅಂದಿನ ದಿನಗಳಲ್ಲಿ 25 ವಾರ ಮೈಸೂರಿನಲ್ಲಿ ಜಯಭೇರಿ ಬಾರಿಸಿತ್ತು. ಅವರಣ್ಣನಷ್ಟು ಶ್ರೇಷ್ಠ ನಟನಲ್ಲದಿದ್ದರೂ 60ರ ದಶಕದಲ್ಲಿ ಪಡ್ಡೆಗಳ ಪ್ರೀತಿಯ ನಟ ಶಮ್ಮಿ ಕಪೂರ್ ಎಂಬುದಂತೂ ಸತ್ಯ!

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ